ಅ) ಹಾಗಿದ್ದಲ್ಲಿ ಇದನ್ನು ಕೂಡಲೆ ದುರಸ್ತಿ ಮಾಡಲು ಸರ್ಕಾರದವರು ಕೈಗೊಳ್ಳುತ್ತಿರುವ ಕ್ರಮಗಳೇನು ಹಾಗೂ ಈ ದುರಸ್ತಿಗೆ ಆಗುವ ಅಂದಾಜು ಮೊತ್ತವೆಷ್ಟು?

ಶ್ರೀ ಶಿವನಾಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಮಹದೇಶ್ವರ ಬೆಟ್ಟ ಪಾಲಾರ್ ರಸ್ತೆಯ ಸರಪಳಿ 139.20 ರಿಂದ 155.70ರವರೆಗೆ ರಸ್ತೆಯ ಮೇಲೆ ಅನಿರೀಕ್ಷಿತ ಮಳೆಯಿಂದಾಗಿ ಉರುಳಿಕೊಂಡು ಬಂದು ಬಿದ್ದಿದ್ದ ಬಂಡೆಕಲ್ಲು ಮಣ್ಣು ಮತ್ತು ಇತರ ವಸ್ತುಗಳನ್ನು ಬಾರೀ, ಯಂತ್ರಗಳನ್ನು ಬಳಸಿ ಹಗಲು ರಾತ್ರಿ ಸಮರೋಪಾದಿಯಲ್ಲಿ ಕಾರ್ಯೋನ್ಮುಖರಾಗಿ ರಸ್ತೆಯನ್ನು ವಾಹನ ಸಂಚಾರಕ್ಕೆ ದಿನಾಂಕ 1.9.95ರಂದು ತೆರವು ಮಾಡಲಾಗಿದೆ.

ಈ ತಾತ್ಕಾಲಿಕ ರಸ್ತೆ ತರೆವು ದುರಸ್ತಿಗೆ ಸುಮಾರು 10.00 ಲಕ್ಷ ರೂ. ವೆಚ್ಚ ಆಗಿದೆ. ಈ ರಸ್ತೆಯಲ್ಲಿ ಶಿಥಿಲಗೊಂಡಿರುವ ಮೋರಿಗಳು ತಡೆಗೋಡೆ ಮತ್ತು ಹಾಳಾಗಿರುವ ರಸ್ತೆ ಮತ್ತು ಇತರ ದುರಸ್ತಿಗೆ ಸುಮಾರು 30.00 ಲಕ್ಷ ರೂ. ತಗಲುವುದೆಂದು ಅಂದಾಜಿಸಲಾಗಿದೆ.

ಮುಧೋಳ ತಾಲ್ಲೂಕಿನ ಬೆಳಗಾವಿ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ

360 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ಜಿಲ್ಲೆಯ ಮುಧೋಳ ತಾಲ್ಲೂಕಿನ ಬೆಳಗಾವಿ ಗ್ರಾಮವು ಸುಮಾರು 15 ಸಾವಿರ ಜನಸಂಖ್ಯೆ ಹೊಂದಿರುವ ದೊಡ್ಡ ಗ್ರಾಮವಾಗಿದ್ದು ಅಲ್ಲಿಯ ಜನರು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದೆ? ಕಾರ್ಯಕ್ರಮವನ್ನು ರೂಪಿಸದಿದ್ದಲ್ಲಿ ಎಷ್ಟು ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಹೌದು.

ಆ) ಈ ಗ್ರಾಮದ ನೀರು ಪೂರೈಕೆಯ ಸಮಸ್ಯೆಯನ್ನು ಪರಿಹರಿಸಲುವುದಕ್ಕಾಗಿ 1994-95ನೇ ಸಾಲಿನಲ್ಲಿ "ಕೊಳವೆನೀರು ಪೂರೈಕೆ ಯೋಜನೆ - ಪುನಃ ಶ್ವೇತನದಡಿ"ಯಲ್ಲಿ, ಈ ಗ್ರಾಮದಿಂದ ಸುಮಾರು ಒಂದು ಕಿಲೋಮೀಟರ್ ಅಂತರದಲ್ಲಿ ಕೊಳರೆಬಾವಿ ಕೊರೆದು ಅಲ್ಲಿಂದ ಈಗಾಗಲೇ ಇರುವ ಜಲಸಂಗ್ರಹಾಲಯಕ್ಕೆ ಪೈಪಲೈನ್ ಹಾಕಿ ನೀರು ಪೂರೈಕೆ ಮಾಡಲಾಗಿದೆ.